**AKSHARASURYA**
Peer-Reviewed, Multi Lingual E-Journal
Volume – 02, Issue – 01, January 2023.

# ಮೌಲ್ಯ ಸಾಹಿತ್ಯದ ಹಿರಿಮೆ–ಗರಿಮೆ.

**ಡಾ. ಹೆಚ್.ಎಂ. ಮಲ್ಲಿಕಾರ್ಜುನ**
ಹುಸ್ಕೂರು ಗ್ರಾಮ ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ ೫೭೧೩೧೫
ಮೊ. 8971665734
mallikarjunahm2012@gmail.com

ಬದುಕು ನಿರಂತರಯಾನ, ಯಾರಿರಲಿ, ಇರದಿರಲಿ ಸಾಗುವುದು ಅದರ ವೈಶಿಷ್ಟ್ಯತೆ. ನಾಗರಿಕತೆಗಳ ಉದಯ ಕಾಲದಲ್ಲಿಯೂ ಈ ಜಗತ್ತು ಇದ್ದಿತು, ರಾಜಮಹಾರಾಜರ ಆಳ್ವಿಕೆಯ ಕಾಲದಲ್ಲಿಯೂ ಈ ಜಗತ್ತು ಇದ್ದಿತು. ಈ ಸತ್ಯ ಅರಿತಿದ್ದರೂ ಸಹ ಮನುಷ್ಯ, ನಾನಿಲ್ಲದೇ ಯಾವುದೂ ನಡೆಯುವುದಿಲ್ಲ, ನನ್ನನ್ನು ನಂಬಿದವರ ಹೊಣೆ ಯಾರು ಹೊರುತ್ತಾರೆ ಎಂಬ ಆತಂಕವನ್ನು ಸದಾ ಮನಸ್ಸಿನಲ್ಲಿ ತುಂಬಿಕೊಂಡಿರುತ್ತಾನೆ. ಮೊದಲಿಗೆ ಈ ಭ್ರಮೆಗಳನ್ನು ಕಳಚಿಡಬೇಕಿದೆ.

ಈ ಸುಂದರಸೃಷ್ಟಿಯಲ್ಲಿ ಮನುಷ್ಯನೂ ಕೂಡಾ ಒಂದು ಜೀವಿ ಎಂಬುದು ಸರ್ವವಿಧಿತ ಸತ್ಯ. ಬುದ್ಧಿವಂತಿಕೆ, ಆಲೋಚನಾ ಲಹರಿ, ಬದುಕುವ ಕೌಶಲದ ವಿಶೇಷತೆಯಿಂದಲಷ್ಟೇ ಆತನಿಗೆ ಮಹತ್ವದ ಸ್ಥಾನವನ್ನು ಮನುಷ್ಯರಾದ ನಾವುಗಳೇ ಕೊಟ್ಟುಕೊಂಡಿದ್ದೇವೆ. ಇನ್ನುಳಿದಂತೆ ಪ್ರಕೃತಿಯ ಮುಂದೆ ಆತ ಎಲ್ಲರಂತೆಯೇ ಒಂದು ಜೀವಿ. ಮನುಷ್ಯ ಕಾಲದಿಂದ ಕಾಲಕ್ಕೆ ಬೆಳೆಯುತ್ತಾ, ಬದಲಾಗುತ್ತಾ ತನ್ನ ಬದುಕಿಗೆ ಹೊಸ ತಿರುವುಗಳನ್ನು ತಂದುಕೊಂಡಿದ್ದಾನೆ. ಈ ಜಗತ್ತಿನಲ್ಲಿ ಹಲವು ಭಾಷೆ, ಪ್ರದೇಶ, ಸಂಸ್ಕೃತಿ, ಧರ್ಮ ಮೊದಲಾದವುಗಳು ಸಹಜಗತಿಯಲ್ಲಿ ನೆಲೆಸಿವೆ. ಎಲ್ಲರೂ ತಮ್ಮ ತಮ್ಮ ತತ್ವಸಿದ್ಧಾಂತಗಳಡಿಯಲ್ಲಿ ತಾವೇ ಶ್ರೇಷ್ಠ ಎಂದು ಘೋಷಿಸಿಕೊಂಡಿದ್ದಾರೆ. ಆದರೆ ಎಲ್ಲರ ಹುಟ್ಟಿನ ಮೂಲ ಒಂದೇ ಎಂದು ಡಾರ್ವಿನ್ನನ ವಿಕಾಸ ಸಿದ್ಧಾಂತ ತಿಳಿಸುತ್ತದೆ.

ಮನುಷ್ಯ ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ ಬೆಳೆದಷ್ಟು ಅಂತರಂಗದ ನಿಟ್ಟಿನಲ್ಲಿಯೂ ದರ್ಶನವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾನೆ. ಆ ಕಾರಣಕ್ಕಾಗಿಯೇ ಕ್ರೌರ್ಯವನ್ನು ಖಂಡಿಸಿ ಜಗತ್ತಿನಲ್ಲಿ ಕ್ರಿಶ್ಚಿಯನ್, ಮುಸಲ್ಮಾನ, ಬೌದ್ಧ, ಜೈನ, ಶರಣಧರ್ಮ, ಸಿಖ್ ಮೊದಲಾದ ಮತಧರ್ಮಗಳು ಅವುಗಳ ಧರ್ಮ ಗುರುಗಳ ಮಾರ್ಗದರ್ಶನದೊಂದಿಗೆ ಬೆಳೆದು ನಿಂತಿವೆ. ಅಂತೆಯೇ ಜನರನ್ನು ಸನ್ಮಾರ್ಗದೆಡೆಗೆ ಸಾಗಿಸಲು ನಿತ್ಯನಿರಂತರವಾಗಿ ಪ್ರಯತ್ನಶೀಲವಾಗಿವೆ. ಕೆಲವು ಮೂಲಭೂತವಾದಿತನವನ್ನು ಮೇಲೆತ್ತಲು ಪ್ರಯತ್ನಿಸಿ ಜನರ ಅಂತರಂಗದಿಂದ ದೂರವಾಗಿವೆ. ಕೆಲವರು ಆ ಮೂಲಭೂತವಾದಿತನವನ್ನೇ ಶ್ರೇಷ್ಠವೆಂದು ಬಗೆದು ಅನುಸರಿಸುತ್ತಾ ಸಮಾಜಕಂಠಕರಾಗಿ ಮಾರ್ಪಟ್ಟಿದ್ದಾರೆ.

ಕಾಲಗತಿಯಲ್ಲಿ ಅಸ್ತಿತ್ವಕ್ಕಾಗಿ ನಡೆದ ಧರ್ಮಗಳ ಮೇಲಾಟ, ರಾಜಕೀಯ ಕದನ, ಸಾಮ್ರಾಜ್ಯದ ಅಧಿಪತ್ಯಕ್ಕಾಗಿ ನಡೆದ ಸುದೀರ್ಘ ಯುದ್ಧಗಳು. ಸಂಸ್ಕೃತಿಗಳ ಮಿಲನ, ಒತ್ತಾಯಪೂರ್ವಕವಾಗಿ ಧರ್ಮದ ಹೇರುವಿಕೆ. ಜನಾಂಗೀಯ ಕಾರಣದಿಂದ ನಡೆದ ದೌರ್ಜನ್ಯ ಎಲ್ಲವೂ ಜನಸಾಮಾನ್ಯರನ್ನು ದಿಕ್ಕೆಡಿಸಿತು. ಉನ್ನತ ಸ್ಥಾನಮಾನ ಪಡೆದವರು ಯಾರೊಬ್ಬರೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡು ಬದುಕನ್ನು ಸಾಗಿಸಿದರು. ಅಸುನೀಗಿದವರು, ನೊಂದು ಬಳಲಿದವರು ಬಡವರು, ಸಾಮಾನ್ಯರು, ಇತ್ಯಾದಿ.

ಸಮಾಜದಲ್ಲಿ ಜರುಗಿದ ಘಟನೆಗಳನ್ನು ದಾಖಲಿಸುವ ಕೆಲಸವು ಸಾಹಿತ್ಯ ಚಟುವಟಿಕೆಯಲ್ಲಿ ನಡೆದಿದೆ. ಕೆಲವರು ಆಳರಸರನ್ನು ಮೆಚ್ಚಿಸಲು ಬರೆದರೆ, ಮತ್ತೆ ಕೆಲವರು ಧರ್ಮಕ್ಕಾಗಿ ಬರೆದಿದ್ದಾರೆ. ಮತ್ತೆ ಕೆಲವರು ಜೀವಮುಖಿಯಾದ ಸಾಹಿತ್ಯವನ್ನು ರಚಿಸಿ ನೊಂದವರಿಗೆ ಧ್ವನಿಯಾದರು, ಅವರನ್ನು ಮುಖ್ಯವಾಹಿನಿಗೆ ತರಲು ಅವಿರತವಾಗಿ ಶ್ರಮಿಸಿದರು. ಕನ್ನಡದಲ್ಲಿ ಶರಣ ಸಾಹಿತ್ಯ, ದಾಸಸಾಹಿತ್ಯ, ತತ್ವಸಾಹಿತ್ಯ ಆ ನಿಟ್ಟಿನಲ್ಲಿ ಗುರುತಿಸುವಂತಹವು.

ಕಾಲಗತಿಯಲ್ಲಿ ಮನುಷ್ಯ ಪ್ರಬುದ್ಧನಾದಂತೆ ಮತ್ತೊಬ್ಬರನ್ನು ಗೌರವಿಸುವ, ಪ್ರೀತಿಸುವ, ಆದರಿಸುವ ಗುಣವಂತಿಕೆಯನ್ನು ಬೆಳೆಸಿಕೊಂಡನು. ಅದು ನಿರಂತರ ಅಧ್ಯಯನದ ಫಲ, ಹಿರಿಯರಿಂದ ಬಂದ ಮಾರ್ಗದರ್ಶನ, ಮೌಲ್ಯಾತ್ಮಕ ಗ್ರಂಥಗಳ ಅಧ್ಯಯನ ಇದೆಲ್ಲದಕ್ಕೂ ಪ್ರೇರೇಪಣೆಯನ್ನು ಒದಗಿಸಿದ್ದಿತು. ಅದಲ್ಲದೆ ಸುಬುದ್ಧಿಯ ಜೊತೆಗೆ ದುರ್ವರ್ತನೆಗಳೂ ಮನುಷ್ಯದ

ಸ್ವಾರ್ಥವಾದಿತನದಿಂದ ಆತನ ಅಂತರಂಗದಲ್ಲಿ ಬೇರೂರಿತು. ಅನ್ಯರೇಳ್ಗೆಗೆ ಒಳಗೊಳಗೆ ಕುದಿದು ಬಾಹ್ಯದಲ್ಲಿ ಸಾತ್ವಿಕನಂತೆ ನಟಿಸುವ ಕೌಶಲ್ಯವನ್ನು ರೂಢಿಸಿಕೊಂಡನು. ಆದರೂ ಮೌಲ್ಯಪ್ರತಿಪಾದನೆ ನಿತ್ಯನಿರಂತರವಾಗಿ ಜಗತ್ತಿನಲ್ಲಿ ನಡೆಯತೊಡಗಿತು.

ಜೈನಧರ್ಮ ಅಹಿಂಸೆಯನ್ನು ಪ್ರಧಾನವಾಗಿ ಪ್ರತಿಪಾದಿಸಿದ ಧರ್ಮವಾಗಿದೆ. ಯಾವೊಂದು ಜೀವಿಯನ್ನು ಹಿಂಸಿಸಬಾರದು ಪ್ರತಿಯೊಂದರಲ್ಲಿಯೂ ಜೀವಕಾಳಜಿಯನ್ನು ತೋರಬೇಕೆಂಬುದೇ ಅದರ ಧ್ಯೇಯ. ಅದಕ್ಕಾಗಿಯೇ ಸರ್ವಜ್ಞನೆಂಬ ಕವಿ ಜೈನಧರ್ಮದ ವಿಚಾರವನ್ನು ಮಥಿಸಿ ಗೌರವಭಾವದಿಂದ ತ್ರಿಪದಿಯನ್ನು ಬರೆದಿದ್ದಾನೆ.

**ಕೊಲುವ ಧರ್ಮವನೊಯ್ದು ಒಲೆಯೊಳಗಿಕ್ಕುವುದು**
**ಕೊಲಲಾಗದೆಂಬ ಜೈನರ ಮತವೆನ್ನ**
**ತಲೆಯ ಮೇಲಿರಲಿ ಸರ್ವಜ್ಞ**[೧]

ಜೈನ ಧರ್ಮ ಅಹಿಂಸೆಯನ್ನು ಮಾತ್ರದೇ ಪ್ರತಿಪಾದಿಸದೇ, ಆಡಂಬರದ ಜೀವನದಿಂದ ವಿಮುಖರಾಗಬೇಕೆಂದು ತಿಳಿಸಿರುವುದಕ್ಕೆ ಹಲವಾರು ಕಥೆಗಳು ಸಾಕ್ಷಿಯಾಗಿವೆ. ಪರಮತ ಸಹಿಷ್ಣುತೆಯೂ ಕೂಡಾ ಈ ಧರ್ಮದ ಪ್ರಮುಖ ಚಿಂತನೆಗಳಲ್ಲಿ ಒಂದಾಗಿರುವುದುನ್ನು ಕಾಣಬಹುದು. ಇದಲ್ಲದೇ ಆಸೆಯೇ ದುಃಖಕ್ಕೆ ಮೂಲ ಎಂದಿರುವ ಬುದ್ದನ ತತ್ವವು ಜಗತ್ತಿಗೆ ಮಾದರಿಯಾಗಿರುವಂಥದ್ದು. ಯುದ್ಧೋತ್ಸಾಹಿಯಾಗಿದ್ದ ಅಶೋಕನನ್ನು, ಅಂಗುಲೀಮಾಲನನ್ನು ಬದಲಾಯಿಸಿದ ಕೀರ್ತಿ ಮತ್ತು ಜಗತ್ತಿನಾದ್ಯಂತ ಈ ಧರ್ಮ ಪ್ರಸರಣವಾಗಿ ಧನಾತ್ಮಕ ಮನೋಧೋರಣೆ ಎಲ್ಲೆಡೆ ಪ್ರಸರಿಸಲು ಕಾರಣವಾದ ಖ್ಯಾತಿಯು ಈ ಧರ್ಮಕ್ಕೆ ಸಲ್ಲಬೇಕು.

೧೨ನೇ ಶತಮಾನದ ಕಾಲಘಟ್ಟದಲ್ಲಿದ್ದ ಅಸಮಾನತೆಗಳನ್ನು ಖಂಡಿಸಿ, ಸಮಾಜೋಧಾರ್ಮಿಕ ಚಿಂತನೆಗಳನ್ನು ಪ್ರಧಾನವಾಗಿರಿಸಿಕೊಂಡು ಜನಸಾಮಾನ್ಯರನ್ನು ಮೇಲೆತ್ತಲು ಪ್ರಯತ್ನಿಸಿದ ಶರಣರ ಚಳುವಳಿ ಜಗತ್ತಿಗೆ ಮಾದರಿಯಾಗಿದೆ. ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಚಳುವಳಿ ಮಾನವನ ಇತಿಹಾಸದಲ್ಲಿ ಗುರುತರವಾದ ಕೆಲಸವನ್ನು ಮಾಡಿರುವುದರ ಜೊತೆಗೆ, ಇಂದಿನ ಜನರ ಬದುಕಿಗೆ ಉತ್ತಮ ಸಂದೇಶವನ್ನು ನೀಡಿದೆ. ನುಡಿಯೊಳಗೆ ಜಾಣರಲ್ಲದೇ ನಡೆಯೊಳಗೂ ಜಾಣರೆಂಬುದನ್ನು ಪ್ರತಿಪಾದಿಸಿದ ಚಳುವಳಿ ಅವರದಾಗಿತ್ತು. ರಾಜಾಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದ ಬಸವಣ್ಣನವರಿಂದ ಚರ್ಮ ಹದ ಮಾಡಿ ಪಾದುಕೆ ತಯಾರಿಸುವ ಮಾದಾರ ಚನ್ನಯ್ಯನವರವರೆವಿಗೂ ಕಾಯಕದಲ್ಲಿ ಯಾವುದೇ ಭಿನ್ನತೆಯಿರದೇ ಕಾಯಕವೇ ಕೈಲಾಸವೆಂದ ಚಿಂತನೆ ಅಲ್ಲಿದ್ದಿತು. ಜಾತಿಸಂಕೋಲೆಗಳನ್ನು ಮೀರಿ ಬದುಕಬೇಕೆಂಬುದು ಅವರ ಪ್ರಬಲ ಧ್ಯೇಯವಾಗಿತ್ತು.

**ಆವಾವ ಜಾತಿ ಗೋತ್ರದಲ್ಲಿ ಬಂದಡೂ**
**ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕವಿಲ್ಲದಿರಬೇಕು**
**ಆವಾವ ವ್ರತವ ಹಿಡಿದಡೂ, ಇದಿರ ದಾಕ್ಷಿಣ್ಯವ ಮರೆದು**
**ತನ್ನಯ ತ್ರಿಕರಣ ಶುದ್ಧವಾಗಿ ನಡೆಯಬೇಕು**
**ಪರಪುರುಷಾರ್ಥಕ್ಕೆ ಅರಿಯಿಸಿಕೊಂಬಡೆ ಮೂಗ**
**ಅರುಹಿರಿಯರು ಹೇಳಿದರೆಂದು ಕಲಸಬಹುದೆ ಅಮಂಗಲವ**
**ಇಂತೀ ಕ್ರೀಯಲ್ಲಿ ಭಾವಶುದ್ಧವಾಗಿ**
**ಭಾವದಲ್ಲಿ ದಿವ್ಯಜ್ಞಾನಪರಿಪೂರ್ಣವಾಗಿಪ್ಪ ಗುರುಚರಭಕ್ತಂಗೆ**
**ಚೆನ್ನಬಸವಣ್ಣ ಸಾಕ್ಷಿಯಾಗಿ**
**ಕಮಳೇಶ್ವರಲಿಂಗವು ತಾನೆಯೆಂದು ಭಾವಿಸುವನು.**[೨]

ಕ್ಷೌರಿಕ ವೃತ್ತಿಯಲ್ಲಿ ನಿರತನಾಗಿದ್ದ ಕನ್ನಡಿಕಾಯಕದ ಅಮ್ಮಿದೇವಯ್ಯ ಬರೆದಿರುವ ಹತ್ತು ವಚನಗಳು ಮಾತ್ರವೇ ಉಪಲಬ್ಧವಿದ್ದು; ಅದರಲ್ಲಿಯೇ ಜಾತಿ ಮುಖ್ಯವಲ್ಲ ಕಾಯಕ ಮುಖ್ಯ ಎಂದು ಹೇಳುವ ಅವನ ದಿಟ್ಟತನ, ನೇರವಾದಿತನವು ಇನ್ನುಳಿದೆಲ್ಲಾ ಶರಣರೂ ಇದೆ ಮಾದರಿಯಲ್ಲಿದ್ದರು ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸುತ್ತದೆ. ಇದೇ ರೀತಿ ನೂರಾರು ಕಾಯಕಗಳಲ್ಲಿ ನಿರತರಾದ ಶರಣರೆಲ್ಲರೂ ತಮ್ಮದೇ ಅಂಕಿತಗಳನ್ನು ಇರಿಸಿಕೊಂಡು ಸ್ವತಂತ್ರಧೀರರಾಗಿ ವಚನ ರಚಿಸತೊಡಗಿದರು ಅವು ಎಲ್ಲಾ ಕಾಲಕ್ಕೂ ಸಲ್ಲುವ ಅಮೂಲ್ಯ ಭಂಡಾರವೆನ್ನಿಸಿದವು.

ಸಂಪ್ರದಾಯದ ಬೇಲಿಯನ್ನು, ದೌರ್ಜನ್ಯವನ್ನು, ಡಂಭಾಚಾರದ ಭಕ್ತಿಯನ್ನು, ಮೇಲು-ಕೀಳೆಂಬ ಭೇದವನ್ನು ತೊಡೆದುಹಾಕಲು ಮತ್ತೊಂದು ಚಳುವಳಿ ದಾಸ ಸಾಹಿತ್ಯದ ಕೀರ್ತನಾಕಾರರ ಕಾಲದಲ್ಲಿ ನಡೆಯಿತು. ಇದಕ್ಕೆ ವಚನ ಚಳುವಳಿಯೂ ಪ್ರೇರಣೆಯನ್ನು ನೀಡಿತೆನ್ನುವುದು ಸತ್ಯ. ಇಲ್ಲಿ ಹರಿಭಕ್ತಿ ಪ್ರಧಾನವಾದರೂ ಅಲ್ಲಿ ನಿಷ್ಕಲ್ಮಷವಾದ ಭಕ್ತಿಯೇ ಶ್ರೇಷ್ಠತಮವಾದುದು ಎಂಬ ಚಿಂತನೆಯನ್ನು ಎಲ್ಲೆಡೆ ಬಿತ್ತರಿಸಿ ಅದರ ಪರಾಕಾಷ್ಠೆಯ ಆನಂದವನ್ನು ತಮ್ಮ ಕೀರ್ತನಾ ಸಾಹಿತ್ಯದಲ್ಲಿ ಅವ್ಯಾಹತವಾಗಿ ದಾಸರು ಬಿತ್ತರಿಸಿದ್ದಾರೆ. ಈ ಕಾಲದಲ್ಲಿ ಬಂದ ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಶ್ರೀಪಾದರಾಯರು ಇವರೇ ಮೊದಲಾದವರು ದಾಸ ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತರಕ್ಕೆ ಕೊಂಡೊಯ್ದವರು. ಬದುಕಿನಲ್ಲಿ ಎಂಥಹದ್ದೇ ಸನ್ನಿವೇಶ ಬಂದರೂ ಅವರನ್ನು ಹರಿಯು ಕಾಪಾಡುತ್ತಾನೆ ಎಂಬ ಆಶಾಭಾವವನ್ನು ಎಲ್ಲೆಡೆಯೂ ಇವರು ಬಿತ್ತಿದ್ದಾರೆ. ವೈಚಾರಿಕ ಚಿಂತನೆ ಈ ಸಾಹಿತ್ಯದ ಮತ್ತೊಂದು ಲಕ್ಷಣ.

**ದುಷ್ಟಮನುಜರು ಪೇಳ್ವ ನಿಷ್ಠುರದ ನುಡಿತಾಳು**
**ಕಷ್ಟಬಂದರೆ ತಾಳು ಕಂಗೆಡದೆ ತಾಳು**
**ನೆಟ್ಟಸಸಿ ಫಲಬರುವ ತನಕ ಶಾಂತಿಯ ತಾಳು**
**ಕಟ್ಟುಬುತ್ತಿಯು ಮುಂದೆ ಉಣಲುಂಟು ತಾಳು**

**ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು**
**ಸುಳಿನುಡಿ ಕುಹಕ ಕುಮಂತ್ರವನು ತಾಳು**
**ಅಳುಕದಲೆ ಬಿರಿಸು ಬಿಂಕದ ನುಡಿಯ ತಾಳು**
**ಹಲಧರಾನುಜನನ್ನು ಹೃದಯದಲಿ ತಾಳು**[೩]

ಬದುಕಿಗೆ ಬರುವ ಯಾವುದೇ ಕಷ್ಟದ ಪರಿಸ್ಥಿತಿಯನ್ನು ತಾಳ್ಮೆಯಿಂದ ಎದುರಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕೆಂದು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ. ತಾಳುವಿಕೆಯೇ ತಪಸ್ಸು ಎಂದು ಅರುಹಿದ್ದಾರೆ. ಅದಲ್ಲದೇ ತಾಳುವಿಕೆಯ ಜೊತೆಗೆ ಹಯವದನನಾಗಿರುವ ಭಗವಂತನ ಸ್ಮರಣೆಯಿಂದ ಕಷ್ಟಕಾಲ ಪರಿಹಾರವಾಗುವವರೆಗೂ ತಾಳು ಎಂದು ತಿಳಿಸಿದ್ದಾರೆ. ಬದುಕಿಗೆ ಪ್ರೇರಣೆ, ಮಾರ್ಗದರ್ಶಿಯಾಗಬಹುದಾದ ಚಿಂತನೆ ಎಲ್ಲಾ ಕಾಲದ ಸಾಮಾಜಿಕ ಚಿಂತಕರದ್ದಾಗಿತ್ತು ಎಂಬುದಕ್ಕೆ ಈ ಕೀರ್ತನೆ ಉತ್ತಮ ಉದಾಹರಣೆಯಾಗಿದೆ.

ತತ್ವ ಸಾಹಿತ್ಯ ಕನ್ನಡ ನಾಡಿನ ಶ್ರೇಷ್ಠ ಸಂಪತ್ತಾಗಿದೆ. ಬದುಕಿನ ಬವಣೆಗಳಿಗೆ ಬೆದರದೆ, ಬೆದಕದೆ ಮುನ್ನುಗ್ಗಬೇಕೆಂಬ ಸಂದೇಶವನ್ನೊತ್ತು ಬರುವ ಈ ಗೀತರಚನಾಕಾರರು ಹಳ್ಳಿಹಳ್ಳಿಯಲ್ಲಿ ತಿರುಗಿ ಜನರನ್ನು ಪರಿವರ್ತಿಸುವ ಕಾರ್ಯವನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ನಿತ್ಯನಿರಂತರವಾಗಿ ಮಾಡುತ್ತ ಬಂದುದ್ದರ ಫಲವಾಗಿ ಇಂದು ವಿಫುಲವಾದ ತತ್ವಸಾಹಿತ್ಯ ಕನ್ನಡದಲ್ಲಿ ದೊರಕಿರುವುದು ನಮ್ಮ ಸೌಭಾಗ್ಯವೆಂದೇ ವ್ಯಾಖ್ಯಾನಿಸಬೇಕು. ಒಂದು ಕಾಲದಲ್ಲಿ ಕನ್ನಡ ಸಾಹಿತ್ಯ ಬೀಳು ಯುಗವೆಂದೇ ಈ ಯುಗವನ್ನು ಅಪವ್ಯಾಖ್ಯಾನ ಮಾಡಲಾಗಿತ್ತು. ಕೆಲವೊಂದು ಸಾಹಿತ್ಯಾಸಕ್ತರು ತೆರೆಮರೆಯಲ್ಲಿದ್ದ ಈ ಸಾಹಿತ್ಯವನ್ನು ಮುನ್ನೆಲೆಗೆ ತಂದುದ್ದರ ಫಲವಾಗಿ ಇದರ ಶ್ರೀಮಂತಿಕೆ ಎಲ್ಲರಿಗೂ ತಿಳಿಯುವಂತಾಯಿತು. ನಿಜಗುಣಶಿವಯೋಗಿ, ಸರ್ಪಭೂಷಣ ಶಿವಯೋಗಿ, ಮುಪ್ಪಿನಷಡಕ್ಷರಿ, ಬಾಲಲೀಲಾ ಮಹಾಂತ ಶಿವಯೋಗಿ, ಬಸವಲಿಂಗಶರಣರು, ಕಡಕೊಳದ ಮಡಿವಾಳಪ್ಪನವರು, ಕೂಡಲೂರೇಶ, ನಿಂಬರಗಿ ಮಹಾರಾಜ್, ಶಿಶುನಾಳ ಷರೀಫರು ಹೀಗೆ ಈ ಮೊದಲಾದವರು ತತ್ವಸಾಹಿತ್ಯದಲ್ಲಿ ಸೇವೆಗೈದವರಾಗಿದ್ದಾರೆ. ಇಲ್ಲಿಯೂ ಶಿವಭಕ್ತಿ, ಮುಕ್ತಿಯ ಬೇಡುವ ಯುಕ್ತಿಯ ಪದಗಳು ವಿಫುಲವಾಗಿ ಮೂಡಿಬಂದಿವೆ. ಆದರೆ ಎಲ್ಲಿಯೂ ಆಡಂಬರದ ಭಕ್ತಿ, ತೋರಿಕೆಯ ಬದುಕನ್ನು ಮಾನ್ಯಮಾಡುವ ಅಂಶಗಳು ಕಂಡುಬಂದಿಲ್ಲ ಆ ಕಾರಣಕ್ಕಾಗಿಯೇ ಈ ಸಾಹಿತ್ಯ ಜನಮುಖಿಯಾಗಿ ಬೆಳೆಯಲು, ಹಳ್ಳಿಹಳ್ಳಿಗಳಲ್ಲಿನ ಜನರ ಬಾಯಿಮಾತಿನಲ್ಲಿ ಹರಿದಾಡಲು ಸಾಧ್ಯವಾಯಿತು.

ಸರ್ಪಭೂಷಣ ಶಿವಯೋಗಿಗಳ ಡಾಂಭಿಕ ಭಕ್ತಿಯನ್ನು ವಿರೋಧಿಸುವ ಒಂದು ತತ್ವಪದ ಈ ನೆಲೆಗಟ್ಟಿನಲ್ಲಿ ಗುರುತರವಾದುದಾಗಿದೆ.

**ಬಿಡು ಬಾಹ್ಯದೊಳು ಡಂಭವ ಮಾನಸದೊಳ**
**ಗೆಡೆಬಿಡದಿರು ಶಂಭುವ**
**ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ**
**ಪಡೆದರೆ ಶಿವ ನಿನಗೊಲಿಯನೆ ಮರುಳೇ**[೪]

ಒಳಹೊರಗೆರಡಲ್ಲಿಯೂ ಶುದ್ಧಾತ್ಮನಾಗಿರಬೇಕೆಂಬ ಶರಣರ ತತ್ವವನ್ನೇ ಈ ಸಾಲುಗಳು ತಿಳಿಸುತ್ತಲಿವೆ. ಒಟ್ಟಾರೆಯಾಗಿ ಪ್ರಾರಂಭದ ಶರಣರ ಚಳುವಳಿಯಿಂದ ದಾಸ ಸಾಹಿತ್ಯವನ್ನೊಳಗೊಂಡು ಮುಂದುವರೆದು ಬೆಳೆದ ತತ್ವಸಾಹಿತ್ಯದವರೆಗೆ ಕಾಯಕಪ್ರಜ್ಞೆ, ಭಕ್ತಿಯ ಆರಾಧನೆ, ಅಂತರಂಗ ಬಹಿರಂಗಶುದ್ಧಿಯ ಚಿಂತನೆ, ಎಂಥಹದ್ದೇ ಕಠಿಣ ಸಂದರ್ಭದಲ್ಲಿಯೂ ಜೀವಕಾಳಜಿಯನ್ನು ಮರೆಯದೇ, ಜೀವನ ಪ್ರೀತಿಯನ್ನು ಪ್ರತಿಪಾದಿಸಿರುವುದು ಮೆಚ್ಚತಕ್ಕ ಸಂಗತಿಯಾಗಿದೆ. ಅದಲ್ಲದೇ ಸತ್ಯಶುದ್ಧ ಮಾರ್ಗದ ಪ್ರತಿಪಾದನೆಯೇ ಅಲ್ಲೆಲ್ಲಾ ನಡೆದಿರುವುದು ಸರ್ವವಿಧಿತ. ಈ ಮಾದರಿಯ ಸಾಹಿತ್ಯದ ಸಿರಿಯಿಂದಲೇ ಕನ್ನಡದ ಇಂದಿನ ಸಾಹಿತ್ಯ ಪ್ರಿಯರು ಕಲಿಯಬೇಕಾದ ಮೌಲ್ಯಗಳು ಸಾಕಷ್ಟಿವೆ. ಬದುಕಿನಲ್ಲಿ ಭರವಸೆಯ ಅಲೆಯನ್ನು ಮೂಡಿಸಬಲ್ಲ ಇಂತಹ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ನಾವಿಕರು ನಾವಾದರೆ ಕನ್ನಡ ಸಾಹಿತ್ಯಕ್ಕೆ ಕಿಂಚಿತ್ತದಾರೂ ಸೇವೆಸಲ್ಲಿಸಿದ ಸುಯೋಗ ಖಂಡಿತವಾಗಿ ನಮ್ಮದಾಗಲಿದೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತೇನೆ.

## ಕೊನೆಯ ಟಿಪ್ಪಣಿಗಳು

೧. ಡಾ. ಎಲ್. ಬಸವರಾಜು(ಸಂ) : ಸರ್ವಜ್ಞನ ವಚನಗಳು, ಪು.ಸಂ ೧೧೭
೨. ಡಾ. ಎಂ.ಎಂ. ಕಲಬುರ್ಗಿ (ಪ್ರ.ಸಂ) : ಬಸವಯುಗದ ವಚನ ಮಹಾಸಂಪುಟ ವ.ಸಂ. ೧೩, ಪು.ಸಂ. ೧೯೮
೩. ಎಚ್.ಎಸ್. ವೆಂಕಟೇಶ ಮೂರ್ತಿ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ ೮, ಕೀರ್ತನಾಕಾರರು, ಪು.ಸಂ. ೩೪
೪. ಡಾ. ಹೆಚ್.ಟಿ. ಶೈಲಜ (ಸಂ) : ಡಾ. ಎಚ್. ತಿಪ್ಪೇರುದ್ರಸ್ವಾಮಿ ಸಮಗ್ರ ಸಾಹಿತ್ಯ ಮಾಲೆ–೯, ವಿಮರ್ಶಾ ಸಾಹಿತ್ಯ –೧ ತಾತ್ವಿಕ ವಿಮರ್ಶೆ, ಕನ್ನಡದಲ್ಲಿ ಕೈವಲ್ಯ ಸಾಹಿತ್ಯ ಪು.ಸಂ. ೫೪೫

## ಪರಾಮರ್ಶನ ಗ್ರಂಥಗಳು

೧. ಡಾ. ಎಲ್. ಬಸವರಾಜು(ಸಂ) : ಸರ್ವಜ್ಞನ ವಚನಗಳು, ಸಪ್ನ ಬುಕ್ ಹೌಸ್ ಬೆಂಗಳೂರು ೨೦೧೨
೨. ಡಾ. ಎಂ.ಎಂ. ಕಲಬುರ್ಗಿ (ಪ್ರ.ಸಂ) : ಬಸವಯುಗದ ವಚನ ಮಹಾಸಂಪುಟ : ೧, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೬
೩. ಎಚ್.ಎಸ್. ವೆಂಕಟೇಶ ಮೂರ್ತಿ : ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ ೮, ಕೀರ್ತನಾಕಾರರು, ಸಪ್ನ ಬುಕ್ ಹೌಸ್ ಬೆಂಗಳೂರು, ೨೦೧೮
೪. ಡಾ. ಹೆಚ್.ಟಿ. ಶೈಲಜ (ಸಂ) : ಡಾ. ಎಚ್. ತಿಪ್ಪೇರುದ್ರಸ್ವಾಮಿ ಸಮಗ್ರ ಸಾಹಿತ್ಯ ಮಾಲೆ–೯, ವಿಮರ್ಶಾ ಸಾಹಿತ್ಯ –೧ ತಾತ್ವಿಕ ವಿಮರ್ಶೆ, ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ಭಾರತೀ ಪ್ರಕಾಶನ ಮೈಸೂರು, ೨೦೧೮